ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು,ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ7[2]ಪ್ರಾಶಿಅ.ಹೊ.ಶಾ.73/14-15 ದಿನಾಂಕ: 22/12/2014

**ಜ್ಞಾಪನಾ**

ವಿಷಯ: ಶಾಶ್ವತ ಅನುದಾನರಹಿತವಾಗಿ 2015-16ನೇ ಸಾಲಿನಿಂದ ಹೊಸ ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ನೊಂದಣಿ ಕುರಿತು.

ಉಲ್ಲೇಖ: 1)ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 369 ಪಿ.ಜಿ.ಸಿ 2014 ದಿನಾಂಕ:11.11.2014.

2)ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿ7[2]ಪ್ರಾಶಿಅ.ಹೊ.ಶಾ.73/14-15 ದಿನಾಂಕ: 14/11/2014

3)ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 01/12/2014, 05/12/2014 ಮತ್ತು 15/12/2014.

**************************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷದಂತೆ ಖಾಸಗಿ ಸಂಸ್ಥೆಗಳು 1 ರಿಂದ 5ನೇ ತರಗತಿಯ ವರೆಗೆ ಕನ್ನಡ ಮಾಧ್ಯಮದಲ್ಲಿ/ ಮಾತೃಭಾಷೆಯಲ್ಲಿ ಶಾಲೆ ಪ್ರಾರಂಭಿಸಲು ಮತ್ತು 6 ರಿಂದ 8ನೇ ತರಗತಿ ಆಂಗ್ಲ ಮಾಧ್ಯಮದಲ್ಲಿ ಹಾಗೂ 9 ರಿಂದ 10ನೇ ತರಗತಿಯ ವರೆಗಿನ ಪ್ರೌಢಶಾಲೆಯನ್ನು ಪ್ರಾರಂಭಿಸಲು ಉಲ್ಲೇಖ-1ರ ಅಧಿಸೂಚನೆಯನ್ನು ಆಧರಿಸಿ ಉಲ್ಲೇಖ-2ರಲ್ಲಿ 2015-16ನೇ ಸಾಲಿನ ಹೊಸ ಶಾಲೆಗಳಿಗೆ ಮಂಜೂರಾತಿ ನೀಡುವ ಸಂಬಂಧ ಅನುಸರಿಸಬೇಕಾದ ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ಉಚ್ಚನ್ಯಾಯಾಲಯದ ಆದೇಶದಂತೆ (ರಿಟ್ ಅರ್ಜಿ ಸಂಖ್ಯೆ: 55106/2014, 55713/2014) ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಉಲ್ಲೇಖ-3ರಲ್ಲಿ ವಿವಿಧ ದಿನಾಂಕಗಳನ್ನು ಕಡೆಯ ದಿನಾಂಕವಾಗಿ ಪ್ರಕಟಿಸಲಾಗಿದ್ದು. ಒಟ್ಟಾರೆ ಅರ್ಹ ಶಾಲಾ ಆಡಳಿತ ಮಂಡಳಿಗಳು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಶಾಲಾ ಅನುಮತಿ ಕೋರಿ ಅರ್ಜಿ ಸಲ್ಲಿಸಲು ದಿನಾಂಕ: 20/12/2014ರಂದು ಕಡೆಯ ದಿನಾಂಕ ಮುಕ್ತಾಯಗೊಂಡಿರುತ್ತದೆ.

ಉಲ್ಲೇಖ-2ರ ವೇಳಾಪಟ್ಟಿಯಲ್ಲಿ 6-8 ಆಂಗ್ಲ ಮಾಧ್ಯಮ ಮತ್ತು 9 ರಿಂದ 10 ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ದಿನಾಂಕ: 31/01/2015 ರಂದು ಪ್ರಸ್ತಾವನೆಗಳನ್ನು ಆಯುಕ್ತರಿಗೆ ಸಲ್ಲಿಸುವಂತೆಯೂ ಹಾಗೂ ಮಂಜೂರಾತಿ ಆದೇಶ ನೀಡಲು ದಿನಾಂಕ: 10/03/2015 ಎಂದು ನಿಗಧಿಪಡಿಸಲಾಗಿದ್ದ ದಿನಾಂಕವನ್ನು ಕ್ರಮವಾಗಿ 15/02/2015 ಮತ್ತು 31/03/2015ರ ವರೆಗೆ ವಿಸ್ತರಿಸಿದೆ.

ಇದೇ ದಿನಾಂಕದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು ನೊಂದಣಿ ಪ್ರಾಧಿಕಾರಿಗಳಾಗಿರುವ ಪೂರ್ವ ಪ್ರಾಥಮಿಕ ಹಾಗೂ 1 ರಿಂದ 5 , 6 ರಿಂದ 8 ಕನ್ನಡ ಮಾಧ್ಯಮ ಉದ್ದೇಶಿತ ಶಾಲಾ ಅರ್ಹ ಪ್ರಕರಣಗಳನ್ನು ಮೇಲ್ಕಂಡ ದಿನಾಂಕದಂತೆ ಇತ್ಯರ್ಥಪಡಿಸಲು ತಿಳಿಸಿದೆ. ಉಳಿದಂತೆ ಯಾವುದೇ ದಿನಾಂಕದಲ್ಲಿ ಬದಲಾವಣೆಗಳು ಇರುವುದಿಲ್ಲ.

ಕೆಲವು ಶಾಲಾ ಆಡಳಿತ ಮಂಡಳಿಗಳು ಘನ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿ 1 ರಿಂದ 5ನೇ ತರಗತಿ ಆಂಗ್ಲ ಮಾಧ್ಯಮಕ್ಕೆ ಅನುಮತಿ ನೀಡಲು ಅಧಿಸೂಚನೆಯಲ್ಲಿ ಆಸ್ಪದ ಕಲ್ಪಿಸದೇ ಇರುವ ಬಗ್ಗೆ ಪ್ರಶ್ನಿಸಿರುತ್ತಾರೆ. ಅಂತಹಾ ಅರ್ಜಿದಾರರು ತಾವು ಸಂಘದ ಸದಸ್ಯತ್ವ ಹೊಂದಿರುವ ಶಾಲೆ ಎಂದು ಸಂಬಂಧ ಪಟ್ಟ ಸಂಘದ ದೃಢೀಕರಣ

ಪತ್ರದೊಂದಿಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಅಂತಹಾ ಪ್ರಸ್ತಾವನೆಗಳನ್ನು ಪ್ರತ್ಯೇಕವಾಗಿ ಮುಂದಿನ ಆದೇಶದವರೆಗೆ ಕಾಯ್ದಿರಿಸಿಕೊಳ್ಳುವುದು.

ಭಾಷಾ ನೀತಿ ಉಲ್ಲಂಘನೆ ಮಾಡಿರುವ ಕೆಲವು ಶಾಲೆಗಳ ಆಡಳಿತ ಮಂಡಳಿಗಳು ಘನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ 6 ರಿಂದ 8ನೇ ತರಗತಿ ಶಾಲಾ ಮಂಜೂರಾತಿ ಕೋರಿರುವ ಪ್ರಕರಣಗಳು ಮತ್ತು 1– 5ನೇ ತರಗತಿ ಕನ್ನಡ ಮಾಧ್ಯಮವನ್ನು ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆ ಕೋರಿ ಸಲ್ಲಿಸಿರುವ ಅರ್ಜಿಗಳ ಬಗ್ಗೆ ಸರ್ಕಾರವು ಮುಂದಿನ ಆದೇಶ ಹೊರಡಿಸುವ ವರೆಗೆ ಉಪನಿರ್ದೇಶಕರು ಈ ರೀತಿಯ ಪ್ರಕರಣಗಳನ್ನು ಪ್ರತ್ಯೇಕವಾಗಿ ತಮ್ಮ ಹಂತಲ್ಲೇ ಕಾಯ್ದಿರಿಸಿಕೊಳ್ಳುವಂತೆ ತಿಳಿಯ ಪಡಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ಅಪರ ಆಯುಕ್ತರು ದಾರವಾಡ ಮತ್ತು ಗುಲ್ಬರ್ಗ ವಿಭಾಗ ರವರಿಗೆ,
2. ರಾಜ್ಯ ಎಲ್ಲಾ ಉಪನಿರ್ದೇಶಕರು [ಆಡಳಿತ] ರವರಿಗೆ,
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಧಿಕಾರಿಗಳು, ಸಾ.ಶಿ.ಇಲಾಖೆ ಇವರಿಗೆ
4. ಕಛೇರಿ ಪ್ರತಿ.